# ಪೂಕೋಡ್ ಲೇಕ್



■ ಚಿತ್ರ– ಬರಹ: **ರಮೇಶ್ ಶೆಟ್ಟಿಗಾರ್**





**ಕೇ**ರಳದ ವಯನಾಡಿನಲ್ಲಿ 'ಪೂಕೋಡ್ ಲೇಕ್' ಎಂಬ ರಮ್ಯತಾಣವಿದೆ. ಭಾರತ ಭೂಪಟದ ರಚನೆಯಂತಿರುವ ಇದು ಬೆಟ್ಟಗಳ ಇಳಿಜಾರಿನ ನಿತ್ಯಹರಿದ್ವರ್ಣ ಅರಣ್ಯಗಳ ನಡುವೆ ಹುದುಗಿರುವ ಪ್ರಾಕೃತಿಕ ಸಿಹಿನೀರಿನ ಸರೋವರ.

ಪರಿಸರ ಮಾಲಿನ್ಯದಿಂದ ಮುಕ್ತವಾಗಿರಬೇಕೆಂದು, ಇಲ್ಲಿ ಮೋಟಾರ್ ಬೋಟ್‌ಗಳಿಲ್ಲ. ಬದಲಾಗಿ ರೋಯಿಂಗ್ ಬೋಟಿನ ವ್ಯವಸ್ಥೆಯಿದೆ. ಅಥವಾ ತಾವೇ ಪೆಡಲ್ ಬೋಟನ್ನು ತುಳಿಯುತ್ತಾ ಸುತ್ತಲಿನ ಸೌಂದರ್ಯವನ್ನು ಸವಿಯಬಹುದು. ಸರೋವರದ ಸುತ್ತಲೂ ಕಂಗೊಳಿಸುವ ಹಚ್ಚಹಸಿರಿನ ಕಾನನವನ್ನು ನೋಡುತ್ತಾ ಸ್ವಚ್ಛಂದವಾಗಿ ಅಡ್ಡಾಡಲು ಸುವ್ಯವಸ್ಥಿತ ಹಾಗೂ ವಿಶಾಲವಾದ ಕಾಲುದಾರಿಯಿದೆ. ವಿಶ್ರಾಂತಿ ಪಡೆಯುವವರಿಗೂ ಹಾಗೂ ವನಭೋಜನ ಮಾಡುವವರಿಗೂ ಇದು ಪ್ರಶಸ್ತ ಸ್ಥಳ.

ನೂರಾರು ಮೀನುಗಳಿರುವ ಈ ಸರೋವರವನ್ನು ಸಾಲಂಕೃತಗೊಳಿಸಲೆಂದು ಅರಳಿರುವ ನೀಲಕಮಲಗಳು ಕಣ್ಸೆಳೆಯುತ್ತವೆ. ಉತ್ತಮವಾಗಿ ಸಂರಕ್ಷಿಸಿರುವ ಈ ಸರೋವರದ ಪರಿಸರವು ಫೋಟೋಗ್ರಾಫಿಗೆ ಹೇಳಿ ಮಾಡಿಸಿದಂತಿದೆ. ಸರೋವರದ ಪ್ರವೇಶದ್ವಾರದಲ್ಲಿರುವ ಮಕ್ಕಳ ಆಟೋಟದ ಉದ್ಯಾನ, ಹೂದೋಟ, ಮತ್ಸ್ಯಧಾಮ, ಕರಕುಶಲ ವಸ್ತುಗಳ ಮಾರಾಟ ಮಳಿಗೆ, ತಿಂಡಿತಿನಿಸುಗಳ ಮಳಿಗೆಗಳಿಂದಾಗಿ ಪ್ರವಾಸಿಗರು ತುಂಬಿ ತುಳುಕುತ್ತಾರೆ.

ಈ ಕಿರುಸರೋವರದಿಂದಲೇ ಪನಮಾರಂ ಎಂಬ ತೊರೆಯು ಉಗಮವಾಗಿ ಹರಿದು ಮಾನಂದವಾಡಿಯೆಂಬ ಇನ್ನೊಂದು ತೊರೆಗೆ ಸೇರಿ ಕಬಿನಿ ನದಿಯಾಗಿ ಮಂದೆ ಹರಿಯುತ್ತದೆ. ಪೂಕೋಡ್ ಸಮುದ್ರ ಮಟ್ಟಕ್ಕಿಂತ 770 ಮೀಟರ್ ಎತ್ತರವಿದ್ದು 13 ಎಕರೆಯಷ್ಟು ವಿಶಾಲವಾಗಿದೆ, 6.5 ಮೀಟರಿನಷ್ಟು ಆಳವಿದೆ. ಈ ಸುಪ್ರಸಿದ್ಧ ಪ್ರವಾಸಿ ತಾಣವು ವಯನಾಡಿನ ಕೇಂದ್ರವಾದ ಕಾಲ್ಪೆಟ್ಟದಿಂದ 15 ಕಿ.ಮೀ. ದೂರವಿದೆ.

ಪೋಕೋಡಿನಿಂದ ನಾಲ್ಕು ಕಿ.ಮೀ ದೂರದಲ್ಲಿ ಕೇರಳದ ಚಿರಾಪುಂಚಿ ಎಂದು ಕರೆಯಲ್ಪಡುವ ಅಧಿಕ ಮಳೆಯಾಗುವ 'ಲಕ್ಕಿಡಿ' ಎಂಬ ಪ್ರೇಕ್ಷಣೀಯ ಸ್ಥಳವಿದೆ. ಇಲ್ಲಿರುವ 'ಲಕ್ಕಿಡಿ ವ್ಯೂ ಪಾಯಿಂಟ್' ಎಂಬಲ್ಲಿಂದ ಕಲ್ಲಿಕೋಟೆಗೆ ಇಳಿಯುವ ದುರ್ಗಮವಾದ ಘಾಟಿನ ರಸ್ತೆಯ ನೋಟ ಅದ್ಭುತವಾಗಿದೆ. ಈ ರಸ್ತೆಯ ಅಂಚಿನಲ್ಲಿ ನಿಂತು ಸುತ್ತಲಿನ ರುದ್ರ ರಮಣೀಯ ಪಶ್ಚಿಮಘಟ್ಟ ಮತ್ತು ಕೆಳಗಿನ ಬಯಲಿನ ಸೌಂದರ್ಯವನ್ನು ಸವಿಯಬಹುದು.